ಅ) ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಿಂದ ಹಿಂದಿನ ಸರ್ಕಾರವು ಬಸವ ಕಲ್ಯಾಣ ಅಭಿವೃದ್ಧಿಗಾಗಿ ರೂ. 3.00 ಕೋಟಿ ಮಂಜೂರು ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಇಲ್ಲದಿದ್ದರೆ ಕಾರಣಗಳೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಸರ್ಕಾರಿ ಭೂಮಿಗಳ ಅಕ್ರಮ ಒತ್ತುವರಿ ಹಾಗೂ ಮಾರಾಟ

1762 (2018) ಶ್ರೀ ನಾರಾಯಣಸ್ವಾಮಿ ಎ (ಆನೇಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಮತಕ್ಷೇತ್ರ ಹುಲಿಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಗುಡಿಸಲು ನಿವೇಶನಗಳನ್ನು ನಿರ್ಮಿಸಿಕೊಂಡು ಕೆಲವು ಪ್ರಭಾವಿ ವ್ಯಕ್ತಿಗಳು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಆನೇಕಲ್ ತಾಲ್ಲೂಕಿನ ಕೊಪ್ಪಗೇಟ್ ಬಳಿ ಸ.ನಂ. 110 ಹೆಬ್ಬಗೋಡಿ ಪೊಲೀಸ್ ಠಾಣೆ ಹಿಂಭಾಗ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡ ಸರ್ಕಾರಿ ಭೂಮಿಯ ಒತ್ತುವರಿ ತಡೆಯಲು ಮತ್ತು ಒತ್ತುವರಿ ತೆರವುಗೊಳಿಸಲು ಸರ್ಕಾರ ವಿಳಂಬ ಮಾಡಲು ಕಾರಣವೇನು;

ಇ) ಸದರಿ ಒತ್ತುವರಿ ಭೂಮಿಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇದಕ್ಕೆ ಸಂಬಂಧಿಸಿದ ಹಾಗೆ ದೂರು ಸ್ವೀಕರಿಸಲ್ಪಟ್ಟಿದೆ. ಇದನ್ನು ವಿಚಾರಣೆ ಮಾಡಲಾಗುತ್ತಿದೆ.

ಆ) ತಾಲ್ಲೂಕು ಮೋಜಣಿದಾರರಿಗೆ ಜಮೀನನ್ನು ಅಳತೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತದೆ. ತ್ವರಿತವಾಗಿ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಇ) ಸರ್ಕಾರಿ ಭೂಮಿಯ ಒತ್ತುವರಿಯು ಸಾಬೀತಾದರೆ ಒತ್ತುವರಿ ಮಾಡಲ್ಪಟ್ಟ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯುವುದರ ಬಗ್ಗೆ ಕಾನೂನು ರೀತ್ಯಾ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಹುಣಸೂರು ಪುರಸಭೆ ಆಶ್ರಯ ಮನೆ ಹಣ ಬಿಡುಗಡೆ

1764 (2015) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಪುರಸಭೆ ಆಶ್ರಯ ಸಮಿತಿ ವಿತರಿಸುವ ಮನೆಗಳಿಗೆ ಹಣ ಬಿಡುಗಡೆ ಮಾಡದೇ ಇರಲು ಕಾರಣವೇನು;

ಆ) ಕಳೆದ ಸಾಲಿನಲ್ಲಿ ನಿರ್ಮಿತಿ ಕೇಂದ್ರದವರು ಕಟ್ಟಿದ ಮನೆಗಳ ದಾಖಲಾತಿ ಪೂರ್ಣವಾಗಿಲ್ಲವೆಂದು ಹಣ ಮಂಜೂರು ಮಾಡಿಲ್ಲದಿದ್ದು, ಈಗ ಮಂಜೂರಾಗಿರುವ ಮನೆಗಳು ಪೂರ್ಣಗೊಂಡಿದ್ದು ದಾಖಲಾತಿಗಳು ಒದಗಿಸಿದ್ದರೂ ಹಣ ಬಿಡುಗಡೆ ಮಾಡದಿರಲು ಕಾರಣವೇನು;